**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಹದಿಮೂರನೇ ಅಧಿವೇಶನ**

# ಕನಿಷ್ಠ ಮಜೂರಿಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-5)**

ಕನಿಷ್ಠ ಮಜೂರಿಗಳ ಅಧಿನಿಯಮ, 1948ನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕನಿಷ್ಠ ಮಜೂರಿಗಳ ಅಧಿನಿಯಮ, 1948ನ್ನು (1948ರ ಕೇಂದ್ರ ಅಧಿನಿಯಮ XI) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕನಿಷ್ಠ ಮಜೂರಿಗಳ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 20ನೇ ಪ್ರಕರಣದ ತಿದ್ದುಪಡಿ.-** ಕನಿಷ್ಠ ಮಜೂರಿಗಳ ಅಧಿನಿಯಮ, 1948ರ (1948ರ ಕೇಂದ್ರ ಅಧಿನಿಯಮ XI) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 20ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ, "ಕಾರ್ಮಿಕ ಆಯುಕ್ತನ ದರ್ಜೆಗಿಂತ ಕಡಿಮೆ ಇರದ" ಎಂಬ ಪದಗಳಿಗೆ "ಸಹಾಯಕ ಕಾರ್ಮಿಕ ಆಯುಕ್ತರ ದರ್ಜೆಗಿಂತ ಕಡಿಮೆ ಇರದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (4)ನೇ ಉಪಪ್ರಕರಣದಲ್ಲಿ, "ಐವತ್ತು ರೂಪಾಯಿಗಳನ್ನು" ಎಂಬ ಪದಗಳಿಗೆ "ಒಂದು ಸಾವಿರ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 22ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 22ನೇ ಪ್ರಕರಣದಲ್ಲಿ, "ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾಗಿರುವ" ಎಂಬ ಪದಗಳಿಗೆ "ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದ ಆದರೆ ಹತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾಗಿರುವ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. 22ಎ ಪ್ರಕರಣದ ತಿದ್ದುಪಡಿ.-**ಮೂಲ ಅಧಿನಿಯಮದ 22ಎ ಪ್ರಕರಣದಲ್ಲಿ, "ಐದು ನೂರು ರೂಪಾಯಿಗಳಿಗೆ" ಎಂಬ ಪದಗಳಿಗೆ "ಹತ್ತು ಸಾವಿರ ರೂಪಾಯಿಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕನಿಷ್ಠ ಮಜೂರಿಗಳ ಅಧಿನಿಯಮ, 1948ನ್ನು (1948ರ ಕೇಂದ್ರ ಅಧಿನಿಯಮ 11) ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ,-

(i) ಸಹಾಯಕ ಕಾರ್ಮಿಕ ಆಯುಕ್ತರ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಗೆ ಕ್ಲೇಮುಗಳ ನ್ಯಾಯ ನಿರ್ಣಯಕ್ಕಾಗಿ ಅಧಿಕಾರಗಳನ್ನು ಪ್ರತ್ಯಾಯೋಜಿಸುವುದಕ್ಕೆ; ಮತ್ತು

(ii) 20(4)ನೇ ಮತ್ತು 22ನೇ ಪ್ರಕರಣಗಳ ಅಡಿಯಲ್ಲಿ ಹಲವು ದಂಡನೆಗಳನ್ನು ಮತ್ತು 22ಎ ಪ್ರಕರಣದ ಅಡಿಯಲ್ಲಿ ವಿಧಿಸಿದ ಜುಲ್ಮಾನೆಗಳನ್ನು ಹೆಚ್ಚಿಸುವುದಕ್ಕೆ,

– ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಸಂತೋಷ್ ಎಸ್ ಲಾಡ್**
ಕಾರ್ಮಿಕ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

### ಕನಿಷ್ಠ ಮಜೂರಿಗಳ ಅಧಿನಿಯಮ, 1948ರ (1948ರ ಕೇಂದ್ರ ಅಧಿನಿಯಮ XI) ಉದ್ಧೃತ ಭಾಗ

**XX XX XX**

**20. ಕ್ಲೇಮುಗಳು.-(1)** ಸಮುಚಿತ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ, ಯಾವುದೇ ನಿರ್ದಿಷ್ಟ ಕ್ಷೇತ್ರಕ್ಕಾಗಿ ಕನಿಷ್ಠ ಮಜೂರಿ ದರಗಳಿಗಿಂತ ಕಡಿಮೆ ಸಂದಾಯ ಮಾಡುವುದರಿಂದ ಅಥವಾ ವಿಶ್ರಾಂತಿ ದಿನಗಳಿಗೆ ಅಥವಾ 13ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡ ಅಥವಾ (ಸಿ) ಖಂಡದ ಅಡಿಯಲ್ಲಿ ಅಂಥ ದಿನಗಳಂದು ಮಾಡಿದ ಕೆಲಸಕ್ಕಾಗಿ ಅಥವಾ 14ನೇ ಪ್ರಕರಣದ ಅಡಿಯಲ್ಲಿ ನಿಯೋಜಿತ ಉದ್ಯೋಗಿಗಳಿಗೆ ಹೆಚ್ಚುವರಿ ಅವಧಿ ಕೆಲಸಕ್ಕೆ ಮಜೂರಿಗಳ ಅಥವಾ ಆ ಕ್ಷೇತ್ರದಲ್ಲಿ ಸಂದಾಯ ಮಾಡಿದ ಸಂದಾಯದ ಸಂಬಂಧದಲ್ಲಿ ಉದ್ಭವಿಸುವ ಎಲ್ಲಾ ಕ್ಲೇಮುಗಳನ್ನು ಆಲಿಸಲು ಮತ್ತು ನಿರ್ಧರಿಸಲು ಕಾರ್ಮಿಕರ ಪರಿಹಾರಕ್ಕಾಗಿ ಯಾವೊಬ್ಬ ಆಯುಕ್ತನನ್ನು ಅಥವಾ ಕೇಂದ್ರ ಸರ್ಕಾರದ ಯಾವೊಬ್ಬ ಅಧಿಕಾರಿಯನ್ನು ಅಥವಾ ಕಾರ್ಮಿಕ ಆಯುಕ್ತನ ದರ್ಜೆಗಿಂತ ಕಡಿಮೆ ಇರದ ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿಯನ್ನು ಅಥವಾ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶನಾಗಿ ಅಥವಾ ಸ್ಟೈಫಂಡರಿ ಮ್ಯಾಜಿಸ್ಟ್ರೇಟನಾಗಿ ಅನುಭವ ಹೊಂದಿರುವ ಯಾವೊಬ್ಬ ಇತರೆ ಅಧಿಕಾರಿಯನ್ನು ನೇಮಕ ಮಾಡಬಹುದು.

**XX XX XX**

**(4)** ಈ ಪ್ರಕರಣದ ಅಡಿಯಲ್ಲಿ ಯಾವುದೇ ಅರ್ಜಿಯನ್ನು ಹಿಯರ್ ಮಾಡುವ ಪ್ರಾಧಿಕಾರವು ಅದು ದ್ವೇಷಪೂರ್ವಕವಾಗಿದೆ ಅಥವಾ ಕಿರುಕುಳಕಾರಿಯಾಗಿದೆ ಎಂದು ಮನಗಂಡರೆ, ಅರ್ಜಿಯನ್ನು ಸಲ್ಲಿಸುವ ವ್ಯಕ್ತಿಯು ನಿಯೋಜಕನಿಗೆ ಐವತ್ತು ರೂಪಾಯಿಗಳನ್ನು ಮೀರದ ದಂಡವನ್ನು ಪಾವತಿಸುವಂತೆ ನಿರ್ದೇಶಿಸಬಹುದು.

**XX XX XX**

**22. ಕೆಲವು ಅಪರಾಧಗಳಿಗೆ ದಂಡನೆಗಳು.-**

(ಎ) ಯಾವೊಬ್ಬ ಉದ್ಯೋಗಿಗೆ, ಆ ಉದ್ಯೋಗಿಗಳ ಕೆಲಸದ ವರ್ಗಕ್ಕೆ ನಿಗದಿಪಡಿಸಿದ ಮಜೂರಿಗಳ ಕನಿಷ್ಠ ದರಗಳಿಗಿಂತ ಕಡಿಮೆ ಮಜೂರಿಯನ್ನು ಅಥವಾ ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಆತನಿಗೆ ಬರಬೇಕಾದ ಮೊತ್ತಕ್ಕಿಂತ ಕಡಿಮೆ ಮೊತ್ತವನ್ನು ಸಂದಾಯ ಮಾಡುವ;

(ಬಿ) 13ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಯಾವುದೇ ನಿಯಮ ಅಥವಾ ಹೊರಡಿಸಿದ ಯಾವುದೇ ಆದೇಶವನ್ನು ಉಲ್ಲಂಘಿಸುವ

- ಯಾರೇ ನಿಯೋಜಕನು, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾಗಿರುವ ಅವಧಿಗಾಗಿ ಕಾರಾಗೃಹ ವಾಸದಿಂದ ಅಥವಾ ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗೆ ಒಂದು ಅಪರಾಧಕ್ಕಾಗಿ ಯಾವುದೇ ಜುಲ್ಮಾನೆಯನು ವಿಧಿಸುವಲ್ಲಿ, ನ್ಯಾಯಾಲಯವು 20ನೇ ಪ್ರಕರಣದ ಅಡಿಯಲ್ಲಿ ಕೈಗೊಂಡ ಯಾವುವೇ ವ್ಯವಹರಣೆಗಳಲ್ಲಿನ ಆಪಾದಿತನ ವಿರುದ್ಧ ಈಗಾಗಲೇ ನೀಡಲಾಗಿರುವ ಯಾವುದೇ ಪರಿಹಾರದ ಮೊತ್ತವನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

**22ಎ. ಇತರ ಅಪರಾಧಗಳ ದಂಡನೆಗಾಗಿ ಸಾಮಾನ್ಯ ಉಪಬಂಧಗಳು.--** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಯಾವುದೇ ಉಪಬಂಧವನ್ನು ಅಥವಾ ಅದರಡಿ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸುವ ಯಾವೊಬ್ಬ ನಿಯೋಜಕನು, ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ , 999-ಪ್ರತಿಗಳು 1000, 8ನೇ ಫೆಬ್ರವರಿ, 2017

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**THIRTEENTH SESSION**

# THE MINIMUM WAGES (KARNATAKA AMENDMENT) BILL, 2017
**(L.A. Bill No. 5 of 2017)**

A Bill to amend the Minimum Wages Act, 1948 in its application to the State of Karnataka.

Whereas, it is expedient further to amend the Minimum Wages Act, 1948 (Central Act XI of 1948) for the purposes hereinafter appearing;

Be it enacted by the Karnataka State Legislature in the Sixty-eighth year of the Republic of India as follows:-

1. **Short title and commencement.-** (1) This Act may be called the Minimum Wages (Karnataka Amendment) Act, 2017.

(2) It shall come into force at once.

**2. Amendment of section 20.-** In section 20 of the Minimum Wages Act, 1948 (Central Act XI of 1948), (herein after referred to as the Principal Act,-

(i) in sub-section (1), for the words "not below the rank of Labour Commissioner", the words "not below the rank of Assistant Labour Commissioner" shall be substituted.

(ii) in sub-section (4), for the words "fifty rupees" the words "one thousand rupees" shall be substituted.

**3. Amendment of section 22.-** In section 22 of the Principal Act for the words " which may extend to five hundred rupees" the words "which shall not be less than five thousand rupees but which may extend to ten thousand rupees" shall be substituted.

**4. Amendment of section 22 A.-** In section 22A of the Principal Act, for the words "five hundred rupees" the words "ten thousand rupees" shall be substituted.

## STATEMENT OF OBJECTS AND REASONS

It is considered necessary to amend the Minimum Wages Act, 1948 (Central Act 11 of 1948) in its application to the State of Karnataka in order to,-

(i) delegate the powers to adjudicate the claims to an officer not below the rank of Assistant Labour Commissioner; and

(ii) enhance certain penalties under section 20 (4), 22 and 22A and fines levied.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**SANTOSH S LAD**
Minister for Labour

**S.Murthy**
Secretary (I/C)
Karnataka Legislative Assembly

## ANNEXURE

**Extract from the Minimum Wages Act, 1948 (Central Act XI of 1948)**

XX XX XX

**Section 20 - Claims.- (1)** The appropriate Government may, by notification in the Official Gazette, appoint any Commissioner for Workmen's Compensation or any officer of the Central Government exercising functions as a Labour Commissioner for any region, or any officer of the State Government not below the rank or Labour Commissioner or any other officer with experience as a Judge of a Civil Court or as a stipendiary Magistrate to be the Authority to hear and decide for any specified area all claims arising out of payment of less than the minimum rates of wages or in respect of the payment of remuneration for days of rest or for work done on such days under clause (b) or clause (c) of sub- section (1) of section 13 or of wages at the overtime rate under section 14, to employees employed or paid in that area.

XX XX XX

(4) If the authority hearing any application under this section is satisfied that it was either malicious or vexatious, it may direct that a penalty not exceeding fifty rupees be paid to the employer by the person presenting the application.

XX XX XX

**Section 22. Penalties for certain offences.**-- Any employer who--

(a) pays to any employee less than the minimum rates of wages fixed for that employee's class of work, or less than the amount due to him under the provisions of this Act; or

(b) contravenes any rule or order made under section 13, shall be punishable with imprisonment for a term which may extend to six months, or with fine which may extend to five hundred rupees, or with both;

Provided that in imposing any fine for an offence under this section, the Court shall take into consideration the amount of any compensation already awarded against the accused in any proceedings taken under section 20.

XX XX XX

**22A. General provision for punishment of other offences.**-- Any employer who contravenes any provision of this Act or of any rule or order made there under shall, if no other penalty is provided for such contravention by this Act, be punishable with fine which may extend to five hundred rupees.

XX XX XX

Government Press, Vikasa Soudha Unit, Bengaluru 8st february, 2017 P7, W.D.999, Copies 1000